**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

ದಿಃ 07-02-2020

**ಪಾಟೀ ಸವಾಲುಃ ಶ್ರೀ. ಆರ್ ಎನ್ ಕೆ ವಕೀಲರಿಂದ**

ದಾವೆಯನ್ನು ಪ್ರತಿವಾದಿಯಿಂದ ಸ್ವಾಧೀನ ಕೊಡಿಸುವಂತೆ ದಾಖಲು ಮಾಡಿರುತ್ತೇನೆ. ಪ್ರತಿವಾದಿ ನನ್ನ ಭಾವನಾಗಬೇಕು. ನನ್ನ ಗಂಡ **10** ವರ್ಷದ ಹಿಂದೆ ಮೌತಿಯಾಗಿರುತ್ತಾರೆ. ನನಗೆ ಇಬ್ಬರು ಮಕ್ಕಳಿದ್ದು ಒಂದು ಹೆಣ್ಣು ಮತ್ತು ಒಂದು ಗಂಡು ಇರುತ್ತಾರೆ. ನನ್ನ ಮಗಳಿಗೆ **23** ವರ್ಷ , ಮಗನಿಗೆ **20** ವರ್ಷ ವಯಸ್ಸು. ದಾವಾ ಆಸ್ತಿ ನನ್ನ ಗಂಡನಿಗೆ ವಿಭಾಗದ ಮುಖಾಂತರ ಬಂದಿರುತ್ತದೆ. ನನ್ನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ವಿಭಾಗ **22** ವರ್ಷಗಳ ಹಿಂದೆ ಆಗಿರುತ್ತದೆ. ಪ್ರತಿವಾದಿಯರ ಸ್ವತ್ತಿನಲ್ಲಿ ದಾವಾ ಆಸ್ತಿ ಸೇರಿರುತ್ತದೆ. ನಾನು ಕೆಲಸಕ್ಕೆ ಹೋದ ಸಮಯದಲ್ಲಿ ಪ್ರತಿವಾದಿ ಒತ್ತುವರಿ ಮಾಡಿ ಹಲಗೆ ಹಾಕಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ಈ ಮೊದಲು **4** ವರ್ಷಗಳ ಹಿಂದೆ ನಿರೋದಾಜ್ಞೆ ದಾವೆ ದಾಖಲು ಮಾಡಿದ್ದೆ. ಸದರಿ ದಾವೆ ದಾಖಲು ಮಾಡಿದ ನಂತರ ರಾಜಿ ಮಾಡುವ ಸಂಬಂಧ ನನ್ನ ಹಿಂದಿನ ವಕೀಲರು **3-4** ವರ್ಷಗಳ ಹಿಂದೆ ಮನೆಗೆ ಬಂದು ಆಸ್ತಿಯನ್ನು ಪರಿಶೀಲಿಸಿರುತ್ತಾರೆ. ಆ ಸಮಯದಲ್ಲಿ ಮರದ ಹಲಗೆ ಇತ್ತು ಎಂದರೆ ಸರಿಯಲ್ಲ. ನಾನು ಮೊದಲು ಸಲ್ಲಿಸಿದ ದಾವಾ ಸರಿಯಾಗಿಲ್ಲ ಎಂದು ಈ ದಾವೆ ದಾಖಲು ಮಾಡಿರುತ್ತೇನೆ. ಸದರಿ ದಾವೆಯಲ್ಲಿ ಏನು ಸರಿಯಾಗಿರಲಿಲ್ಲ ಎಂದು ನನಗೆ ಹೇಳಲಾಗುವುದಿಲ್ಲ. ಈ ದಾವೆಯಲ್ಲಿ ಹೇಳಿರುವ ಆಸ್ತಿಗಳ ಮೇಲೆ ಹಿಂದಿನ ದಾವೆಯನ್ನು ದಾಖಲು ಮಾಡಿರುತ್ತೇನೆ. ಹಿಂದಿನ ದಾವೆಯನ್ನು **22 X 16 , 9.6 X 14** ಮತ್ತು ಖಾಲಿ ನಿವೇಶನ **20 X 28** ಕ್ಕೆ ಸಂಬಂಧಿಸಿದಂತೆ ದಾಖಲಿಸಿರುತ್ತೇನೆ. ಈ ದಾವೆಯಲ್ಲಿ ಹೇಳಿದ ವಿಸ್ತೀರ್ಣವನ್ನು ಹಿಂದಿನ ದಾವೆಯಲ್ಲಿಯೂ ನಮೂದಿಸಿರುತ್ತೇನೆ. ಪ್ರತಿವಾದಿ ಸದರಿ ಮೂರೂ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿಲ್ಲ. ಸಾಕ್ಷಿ ಮುಂದುವರಿದು **22 X 16** ರಲ್ಲಿ ಸ್ವಾಧೀನ ಹೊಂದಿರುತ್ತಾರೆ ಎಂದು ಉತ್ತರಿಸುತ್ತಾರೆ. ಅದರ ಖಾತೆ ನಂಬರ್ **3402**/ಸಿ /**3119**/ಸಿ ಆಗಿರುತ್ತದೆ. ನಾನು ದಾವೆಯಲ್ಲಿ ಎರಡು ಷೆಡ್ಯೂಲ್ ತೋರಿಸಿರುತ್ತೇನೆ. ನಾನು ದಾವೆಯಲ್ಲಿ **22 X 16** ರಲ್ಲಿ **9.5** ಅಡಿ ಒತ್ತುವರಿ ಮಾಡಿರುವುದನ್ನು ಬಿಡಿಸಿಕೊಡುವಂತೆ ಕೇಳಿರುತ್ತೇನೆ. ನಾನು ದಾವೆಯಲ್ಲಿ ಯಾವ ಸಮಯದಲ್ಲಿ ಪ್ರತಿವಾದಿ ಒತ್ತುವರಿ ಮಾಡಿರುತ್ತಾರೆಂದು ಹೇಳಿರುವುದಿಲ್ಲ. ನನಗೆ ದಾವೆ ಸಲ್ಲಿಸುವಾಗ ಯಾವ ಉದ್ದೇಶಕ್ಕಾಗಿ ಒತ್ತುವರಿ ಮಾಡಿರುತ್ತಾರೆ ಎಂದು ಹೇಳಲು ಗೊತ್ತಾಗಲಿಲ್ಲ. ನಾನು ಹಿಂದೆ ಸಲ್ಲಿಸಿದ ದಾವೆಯಲ್ಲಿ ಪ್ರತಿವಾದಿ ಸಲ್ಲಿಸಿದ ಲಿಖಿತ ಹೇಳಿಕೆಯ ಅಂಶಗಳನ್ನು ತಿಳಿದುಕೊಂಡಿಲ್ಲ. ನನ್ನ ಅತ್ತೆ ಅವರ ಮಗಳ ಮನೆಯಲ್ಲಿ ವಾಸವಾಗಿರುತ್ತಾರೆ. ನನ್ನ ಗಂಡ ಮೌತಿಯಾದ ನಂತರ ನನ್ನ ಅತ್ತೆಗೆ ಹಿಸ್ಸೆ ಕೊಟ್ಟಿರುತ್ತೇವೆ. ಲಲಿತ ನನ್ನ ಗಂಡನ ಅಕ್ಕ , ಹಿಂದಿನ ದಾವೆಯಲ್ಲಿ ನಾನು ಲಲಿತಾರರಿಗೆ ಸೇರಿದ ಆಸ್ತಿಯನ್ನು ಸೇರಿಸಿ ದಾವಾ ದಾಖಲು ಮಾಡಿದ್ದೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ನೀಡಿ ಮುಂದೂಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು